**ದಿನಾಂಕ:26-12-2019 ರಂದು ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ನಡೆದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.**

**ಹಾಜರಿದ್ದವರು:**

ಅನುಬಂಧದಲ್ಲಿ ಲಗತ್ತಿಸಿದೆ.

---

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರು ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಸಭೆಗೆ ಆಗಮಿಸಿದ್ದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಇಲಾಖಾ ಅಧಿಕಾರಿಗಳು, ಎಲ್ಲಾ ಅಧೀಕ್ಷಕ ಅಭಿಯಂತರರು (ಗ್ರಾನೀಸ), ಕಾರ್ಯಪಾಲಕ ಅಭಿಯಂತರರು (ಗ್ರಾನೀಸ), ಸಂಯೋಜಕರು (ಸ್ವಚ್ಛ ಭಾರತ ಅಭಿಯಾನ) ರವರಿಗೂ ಸಭೆಗೆ ಸ್ವಾಗತಿಸಿದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರು ಪ್ರಾಸ್ತಾವಿಕವಾಗಿ ಮಾತನಾಡಿ ಪ್ರಸ್ತುತ ಸಾಲಿನಲ್ಲಿ ಮೂರು ತ್ರೈಮಾಸಿಕಗಳು ಕಳೆದಿದ್ದು, ಉಳಿದ ಒಂದು ತ್ರೈಮಾಸಿಕದಲ್ಲಿ ಇಲಾಖೆಗೆ ಒದಗಿಸಿರುವ ಪೂರ್ತಿ ಆಯವ್ಯಯ ಅನುದಾನವನ್ನು ವಿನಿಯೋಗಿಸಲು ಅಗತ್ಯ ಎಲ್ಲಾ ಮುಂಜಾಗರೂಕತಾ ಕ್ರಮ ಕೈಗೊಳ್ಳಲು ಸೂಚಿಸಿದರು. ಜೊತೆಗೆ, ಪ್ರಸ್ತುತ ಸಾಲಿನಲ್ಲಿ ಸ್ವಚ್ಛ ಭಾರತ ಅಭಿಯಾನ, ನಮ್ಮ ಗ್ರಾಮ ನಮ್ಮ ರಸ್ತೆ (ಎಸ್.ಡಿ.ಪಿ.) ಯೋಜನೆಗಳಡಿ ಪ್ರಗತಿ ಕುಂಠಿತವಾಗಿದ್ದು, ಗ್ರಾಮೀಣ ನೀರು ಸರಬರಾಜು ಯೋಜನೆಯಡಿ ಹಿಂದಿನ ವರ್ಷಗಳಲ್ಲಿ ಸ್ಥಾಪಿತವಾದ ಬಹುತೇಕ ಶುದ್ಧ ಕುಡಿಯುವ ನೀರು ಘಟಕಗಳು ಕಾರ್ಯನಿರತವಾಗದೆ ಇರುವುದನ್ನು ಸಭೆಯಲ್ಲಿ ಪ್ರಸ್ತಾಪಿಸಿ ಇವುಗಳ ಕಡೆ ಹೆಚ್ಚಿನ ಆದ್ಯತೆ ನೀಡಬೇಕಾಗಿದ್ದು ವಿಷಯಸೂಚಿಯಂತೆ ಸಭೆ ನಡೆಸಿಕೊಡಲು ಅಧ್ಯಕ್ಷರಲ್ಲಿ ಮನವಿಸಿದರು.

ಮಾನ್ಯ ಸಚಿವರು ಸಭೆಯನ್ನುದ್ದೇಶಿಸಿ ಮಾತನಾಡಿ, ರಾಜ್ಯಾದ್ಯಂತ ಹಾಲಿ **3,945** ಶುದ್ಧ ಕುಡಿಯುವ ನೀರು ಘಟಕಗಳು ಕಾರ್ಯನಿರತವಾಗದೆ ಇರುವುದು, ಸ್ವಚ್ಛ ಭಾರತ ಅಭಿಯಾನ ಯೋಜನೆಯಡಿ ಘನ ತ್ಯಾಜ್ಯ ಘಟಕಗಳ ಸ್ಥಾಪನೆ, ನಿರ್ವಹಣೆ ನಿರೀಕ್ಷಿತ ಮಟ್ಟದಲ್ಲಿಲ್ಲದಿರುವುದು ಮತ್ತು ಪಿ.ಎಂ.ಜಿ.ಎಸ್.ವೈ ಹಂತ-3 ರಾಜ್ಯದಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸಲು ಅಗತ್ಯವಿರುವ ಪೂರ್ವಸಿದ್ಧತಾ ಕ್ರಮಗಳ ಬಗ್ಗೆ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ವೈಯಕ್ತಿಕ ಗಮನ ಹರಿಸಲು ಸೂಚಿಸಿದರು.

ವಿಷಯಸೂಚಿಯಂತೆ ಕೂಲಂಕುಷ ಚರ್ಚೆ ನಡೆಸಿ ಸಭೆಯು ಈ ಕೆಳಕಂಡ ನಿರ್ಣಯಗಳನ್ನು ಕೈಗೊಂಡಿತು:

I. **ಶುದ್ಧ ಕುಡಿಯುವ ನೀರು ಘಟಕಗಳು:**

1) ರಾಜ್ಯದಲ್ಲಿ 16,911 ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆಯಾಗಿದ್ದು, ಪ್ರತಿಯೊಂದು ಶುದ್ಧ ಕುಡಿಯುವ ನೀರು ಘಟಕಕ್ಕೆ ಸಂಬಂಧಪಟ್ಟ ಪಂಚಾಯತ್ ಅಭಿವೃದ್ಧಿ ಅಧಿಕಾರಿರವರು

ಭೇಟಿ ನೀಡಿ ಸ್ಥಳ ಪರಿವೀಕ್ಷಣೆ ನಡೆಸಿ 12,270 ಘಟಕಗಳ ಮಾಹಿತಿ ಪಂಚತಂತ್ರ ತಂತ್ರಾಂಶದಲ್ಲಿ ಇಂದೀಕರಿಸಿದ್ದು, ಉಳಿಕೆ 4,641 ಘಟಕಗಳ ಮಾಹಿತಿ ತುರ್ತು ಇಂದೀಕರಿಸಲು ಕ್ರಮ.

2) 12,270 ಘಟಕ ಸ್ಥಾಪಿತವಾಗಿದ್ದು, ತಂತ್ರಾಂಶದಲ್ಲಿ ಇಂದೀಕರಿಸಿರುವಂತೆ 8,325 ಕಾರ್ಯನಿರತವಾಗಿದ್ದು, ಉಳಿಕೆ 3,945 ಕಾರ್ಯನಿರ್ವಹಿಸದ ಘಟಕಗಳನ್ನು ದಿ:28-01-2020 ರಂದು ಪರಿಶೀಲನಾ ಸಭೆ ಏರ್ಪಡಿಸುವ ಮುನ್ನ ದುರಸ್ಥಿಗೊಳಿಸಿ ವರದಿ ಸಲ್ಲಿಕೆ.

3) ಶುದ್ಧ ಕುಡಿಯುವ ನೀರಿನ ಘಟಕಗಳ ವಿವರಗಳ ಇಂದೀಕರಣಕ್ಕೆ ಸಂಬಂಧಿಸಿದಂತೆ ಅಗತ್ಯವಿರುವ password ಹಾಗೂ ಇನ್ನಿತರ ಮಾಹಿತಿಗಳನ್ನು ತುರ್ತಾಗಿ ಜಿಲ್ಲಾ ಪಂಚಾಯತಿಗಳಿಗೆ ನೀಡಲು ಕ್ರಮ.

4) 3,945 ಕಾರ್ಯನಿರ್ವಹಿಸದ ಘಟಕಗಳನ್ನು ದುರಸ್ಥಿಗೊಳಿಸಲು ಕಡಿಮೆ ಖರ್ಚಿನಲ್ಲಿ ದುರಸ್ಥಿಗೊಳಿಸಬಹುದಾದ ಹಾಗೂ ಹೆಚ್ಚು ಅನುದಾನದ ಅಗತ್ಯತೆ ಇರುವ ಘಟಕಗಳಾಗಿ ವಿಂಗಡಿಸಿ ಕಡಿಮೆ ಖರ್ಚಿನ ಅನುದಾನದಲ್ಲಿ ದುರಸ್ಥಿಗೊಳಿಸಬಹುದಾದ ಘಟಕಗಳನ್ನು ತುರ್ತು ದುರಸ್ತಿಗೊಳಿಸಿ, ಹೆಚ್ಚಿನ ಅನುದಾನ ಅಗತ್ಯವಿರುವ ಘಟಕಗಳನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಅದರ ದುರಸ್ತಿಗೆ ಅಗತ್ಯವಿರುವ ಅನುದಾನದ ಪ್ರಸ್ತಾವನೆಗಳನ್ನು ಮೇಲಾಧಿಕಾರಿಗಳಿಗೆ / ಸರ್ಕಾರಕ್ಕೆ ಸಲ್ಲಿಸಿ ಅನುದಾನ ಪಡೆದು ದುರಸ್ಥಿಗೊಳಿಸಲು ಕ್ರಮ.

5) ಕೊಳವೆ ಬಾವಿಗಳು ಬತ್ತಿ ಹೋಗಿದ್ದಲ್ಲಿ, ನೀರು ಸಂಪರ್ಕವನ್ನು ಪೈಪ್‌ಲೈನ್ ಮೂಲಕ / ಇನ್ನಿತರೆ ಪಕ್ಕದ ಕೊಳವೆ ಬಾವಿಗಳಿಂದ / ಟ್ಯಾಂಕರ್‌ಗಳ ಮೂಲಕ ಒದಗಿಸಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಚಾಲನೆಗೊಳಿಸಲು ಕ್ರಮ.

6) ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆಗೆ ಟೆಂಡರ್ ಕರೆದರೂ ಯಾರೂ ಭಾಗವಹಿಸದೆ ಇರುವುದರಿಂದ ಕಾರ್ಯನಿರ್ವಹಣೆಗೆ ಹಿನ್ನಡೆಯಾಗಿರುವುದನ್ನು ಸಭೆಯು ಮನಗೊಂಡು, ಅಂತಹ ಘಟಕಗಳನ್ನು ಗ್ರಾಮ ಪಂಚಾಯತಿಗಳಿಗೆ ವರ್ಗಾಯಿಸಲು ಕ್ರಮ.

7) ಕಾರ್ಯಪಾಲಕ ಅಭಿಯಂತರರುಗಳು ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಳ ಪರಿಶೀಲನೆ ನಡೆಸಿ ಘಟಕದ ನಿರ್ಧಿಷ್ಟ ತಾಂತ್ರಿಕ ದೋಷಗಳನ್ನು ಗುರುತಿಸಿ ಸವಿವರಗಳನ್ನು ನೀಡುವುದು.

8) ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ನೋಡಲ್ ಅಧಿಕಾರಿಯಾಗಿ ನೇಮಿಸಿ ದುರಸ್ಥಿ ಕಾರ್ಯ ಕೈಗೊಳ್ಳಲು ಕ್ರಮ.

9) ಕೆ.ಆರ್.ಐ.ಡಿ.ಎಲ್. ನಿಂದ ಸ್ಥಾಪಿತ ಬಹುತೇಕ ಘಟಕಗಳು ದುರಸ್ತಿಯಲ್ಲಿದ್ದು, ಅಂತಹ ಘಟಕ ಸ್ಥಾಪಿಸಿ ದೃಢೀಕರಣ ನೀಡಿರುವ ಸಂಸ್ಥೆಯ ಇಂಜಿನಿಯರ್ / ಅಧಿಕಾರಿಗಳ ಪಟ್ಟಿ / ವಿವರಗಳನ್ನು ಶಿಸ್ತು ಕ್ರಮಕ್ಕೆ ಮೇಲಾಧಿಕಾರಿಗಳಿಗೆ ಸಲ್ಲಿಸಲು ಕ್ರಮ.

10) ಈಗಾಗಲೇ ಘಟಕಗಳ ನಿರ್ವಹಣೆಗೆ AMC ಇದ್ದರೂ ಸ್ಪಂದನೆ ನೀಡದೆ ಇರುವ ಗುತ್ತಿಗೆದಾರರಿಗೆ ಹೆಚ್ಚಿನ ದಂಡ ವಿಧಿಸಿ ಒಪ್ಪಂದ ರದ್ದುಗೊಳಿಸಿ, ಠೇವಣಿ ಮೊತ್ತ ಮುಟ್ಟುಗೋಲು ಹಾಕಿ, ಸದರಿ ಮೊತ್ತದೊಂದಿಗೆ ಘಟಕಗಳನ್ನು ಗ್ರಾಮ ಪಂಚಾಯತಿಗೆ ಹಸ್ತಾಂತರಿಸಲು ಕ್ರಮ.

11) ಶುದ್ಧ ಕುಡಿಯುವ ನೀರಿನ ಘಟಕಗಳಿಗೆ ಬಳಕೆಯಲ್ಲಿರುವ ಕಾಯಿನ್ ಬೂತ್ ಬದಲಾಗಿ ಸ್ಮಾರ್ಟ್ ಕಾರ್ಡ್ ಬಳಕೆ ಮಾಡಲು ಅಗತ್ಯ ಕ್ರಮ.

12) ಶುದ್ಧ ಕುಡಿಯುವ ನೀರು ಘಟಕಗಳ ವಾರ್ಷಿಕ ನಿರ್ವಹಣೆ ಅವಧಿ ಅಂತ್ಯಗೊಂಡಿದ್ದಲ್ಲಿ ಅವುಗಳನ್ನು ಮುಂದುವರೆಸಲು ಕ್ರಮ.

13) 15-20 ದಿನ ನಿರಂತರವಾಗಿ ಘಟಕಗಳ ಬಳಕೆಯಾಗದಿದ್ದಲ್ಲಿ, ಘಟಕದಲ್ಲಿರುವ Membrane ಹಾಳಾಗುವುದನ್ನು ತಪ್ಪಿಸಲು ಮುಂಜಾಗರೂಕತಾ ಕ್ರಮ.

14) ಶುದ್ಧ ಕುಡಿಯುವ ನೀರು ಘಟಕಗಳಲ್ಲಿ ಅಳವಡಿಸಿರುವ ಪ್ರತಿ ಕಾಂಪೊನೆಂಟ್‌ಗಳು ಹೇಗೆ ಕಾರ್ಯನಿರ್ವಹಿಸುತ್ತಿವೆ, ಅವುಗಳ ದುರಸ್ಥಿ ಹೇಗೆ ನಿಭಾಯಿಸಬೇಕು ಎಂಬುದರ ಬಗ್ಗೆ ಪ್ರಾತ್ಯಕ್ಷತೆ ಆಯೋಜಿಸಿ ಪ್ರತಿಯೊಬ್ಬ ಪಂಪ್ ಆಪರೇಟರ್‌ಗಳಿಗೆ ದೀರ್ಘ ತರಬೇತಿ ಕಡ್ಡಾಯವಾಗಿ ನೀಡಲು ಕ್ರಮ.

15) ಕೆಲವು ಜಿಲ್ಲೆಗಳಲ್ಲಿ ಶುದ್ಧ ಕುಡಿಯುವ ನೀರು ಘಟಕದೊಳಗೆ ಯಾವುದೇ ಕಾಂಪೊನೆಂಟ್ಸ್ ಇಲ್ಲದಿರುವುದು ಕಂಡುಬಂದಿದ್ದು, ಅಂತಹ ಘಟಕಗಳನ್ನು ಅನುಪಯುಕ್ತಗೊಳಿಸಲು ಅನುಮತಿ ಕೋರಿದ ಹಿನ್ನಲೆಯಲ್ಲಿ ಸರ್ಕಾರವು ವಿನಿಯೋಗಿಸಿರುವ ಅನುದಾನಕ್ಕೆ ಬದ್ಧತೆಯಿದ್ದು, ಅಂತಹ ಘಟಕಗಳನ್ನು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆಯೆಂದು ದೃಢೀಕರಣ ನೀಡಿರುವ ಸಿಬ್ಬಂದಿ / ಅಧಿಕಾರಿಗಳ ವಿವರ ಮೇಲಾಧಿಕಾರಿಗಳು ಪಡೆದು ಶಿಸ್ತು ಕ್ರಮ ಜರುಗಿಸುವುದು.

16) ಶುದ್ಧ ಕುಡಿಯುವ ನೀರಿನ ಪ್ರತಿಯೊಂದು ಘಟಕಗಳ ನಿರ್ವಹಣೆಗೆ ಪ್ರತಿ ಮಾಹೆ ರೂ.3,000/- ನಿರ್ವಹಣಾ ವೆಚ್ಚ ಭರಿಸಲು ಅವಕಾಶವಿದ್ದು, ಸದರಿ ಅನುದಾನ ಸಾಕಾಗದಿರುವುದರಿಂದ ನಿರ್ವಹಣಾ ವೆಚ್ಚವನ್ನು ಸಮರ್ಪಕವಾಗಿ ಹೆಚ್ಚಿಸಲು ಹಾಗೂ ರಾಜ್ಯಾದ್ಯಂತ ಅಸ್ಥಿತ್ವದಲ್ಲಿರುವ ಘಟಕಗಳ ಸಂಪೂರ್ಣ ನಿರ್ವಹಣಾ ವೆಚ್ಚವನ್ನು 2020-21ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿಕೊಳ್ಳಲು ಅಗತ್ಯ ಕ್ರಮ.

17) ಅನಿವಾರ್ಯ ಸನ್ನಿವೇಶಗಳನ್ನು ಹೊರತುಪಡಿಸಿ, ಇನ್ನು ಮುಂದೆ ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆಗೆ ಉತ್ತೇಜಿಸದಂತೆ ಕ್ರಮ.

18) ಕಳಪೆ ಕಾಮಗಾರಿ / ಉತ್ತಮ ಗುಣಮಟ್ಟದ ಸಾಮಗ್ರಿ ಬಳಸದೆ ಶುದ್ಧ ಕುಡಿಯುವ ನೀರು ಘಟಕಗಳನ್ನು ಸ್ಥಾಪನೆಗೊಳಿಸಿದ್ದು, ಅವು ದೀರ್ಘಕಾಲ ಬಳಕೆಗೆ ಬಾರದೆ ಅಲ್ಪಾವಧಿಯಲ್ಲೇ ದುರಸ್ತಿಗೆ ಬಂದಿರುವ ಘಟಕಗಳನ್ನು ಗುರುತಿಸಿ, ಅಂತಹ ಘಟಕಗಳ ಸ್ಥಾಪನೆಗೆ ಕಾರಣಕರ್ತರಾಗಿರುವ ಸಿಬ್ಬಂದಿ / ಅಧಿಕಾರಿಗಳಿಂದ ವಿನಿಯೋಗಿಸಿದ ಅನುದಾನವನ್ನು ವಸೂಲಿ ಮಾಡುವುದರ ಜೊತೆಗೆ ಅವರುಗಳ ಮೇಲೆ ನಿಯಮಾನುಸಾರ ಶಿಸ್ತು ಕ್ರಮ ಕೈಗೊಂಡು ವರದಿ ಸಲ್ಲಿಸಲು ಕ್ರಮ.

19) ಯಾವುದೇ ಸಂಘ ಸಂಸ್ಥೆಗಳು, ವ್ಯಕ್ತಿಗಳು ಶುದ್ಧ ಕುಡಿಯುವ ನೀರು ಘಟಕಗಳನ್ನು ಸ್ಥಾಪಿಸಿ ನಿಗದಿಪಡಿಸಿದ ನೀರಿನ ದರ ಸಂಗ್ರಹಿಸಿ ನೀರು ಒದಗಿಸಲು ಮುಂದಾದರೆ ಅವುಗಳನ್ನು ಪರಿಶೀಲಿಸಿ ಜಾಗ, ನೀರು, ವಿದ್ಯುಚ್ಛಕ್ತಿ ಸೌಲಭ್ಯ ಒದಗಿಸಿ ಉತ್ತೇಜನ ನೀಡಲು ಕ್ರಮ.

II. ಬಹುಗ್ರಾಮ ಕುಡಿಯುವ ನೀರು ಯೋಜನೆಗಳು:

20) ರಾಜ್ಯಾದ್ಯಂತ 477 ಬಹುಗ್ರಾಮ ಕುಡಿಯುವ ನೀರು ಯೋಜನೆಗಳನ್ನು ಕಾರ್ಯಗತಗೊಳಿಸಿದ್ದು, ಅದರಲ್ಲಿ 45 ಯೋಜನೆಗಳು ಸುಸ್ಥಿತಿಯಲ್ಲಿಲ್ಲದಿರುವುದನ್ನು ಸಭೆಯು ಮನಗೊಂಡು ಇದಕ್ಕೆ ಕಾರಣಗಳನ್ನು ವಿಶ್ಲೇಷಿಸಿ ಅವುಗಳನ್ನು ಸುಸ್ಥಿತಿಯಲ್ಲಿಡಲು ಕ್ರಮ ವಹಿಸುವುದು.

21) ಕಾರ್ಯಪಾಲಕ ಅಭಿಯಂತರರುಗಳು ಯೋಜನೆ ವಿಫಲಗೊಂಡಿರುವುದಕ್ಕೆ ಸರ್ವೆ ಸಾಮಾನ್ಯ ಕಾರಣಗಳನ್ನು ನೀಡದೆ, ಯೋಜನೆ ವಿನ್ಯಾಸದ ತೊಂದರೆ, LPCD ಯಲ್ಲಿನ ಹೆಚ್ಚಳ, ಕಡಿಮೆ ನೀರು ಪಂಪಿಂಗ್ ಘಂಟೆಗಳು, ವಿದ್ಯುಚ್ಛಕ್ತಿ ಅಭಾವ, ವೋಲ್ಟೇಜ್ ಸಮಸ್ಯೆ, ಪ್ರತಿ ಗ್ರಾಮದಲ್ಲಿ ಅಳವಡಿಸಿರುವ Bulk Water Meter ಅಧ್ಯಯಿಸಿ ನೀರಿನ ಹರಿವು ಕಡಿಮೆ / ಹೆಚ್ಚಾಗಿರುವುದು, ಜನಸಂಖ್ಯೆ ಹೆಚ್ಚಳ, ಯೋಜನೆಯಡಿ ಆಯ್ಕೆಯಾಗಿರುವ ಮೇಲಿನ ಗ್ರಾಮಗಳು ಹೆಚ್ಚು ನೀರು ಬಳಸುತ್ತಿರುವುದರಿಂದ ಕಟ್ಟ ಕಡೇ ಹಳ್ಳಿಗೆ ನೀರು ತಲುಪುತ್ತಿಲ್ಲದಿರುವುದು – ಇಂತಹ ನಿರ್ಧಿಷ್ಟ ಕಾರಣಗಳನ್ನು ವಿಶ್ಲೇಷಿಸಿ, ಅದಕ್ಕನುಗುಣವಾಗಿ ಅಗತ್ಯ ಕ್ರಮ ಕೈಗೊಂಡು ವರದಿ ನೀಡಲು ಕ್ರಮ.

22) ಕೊಪ್ಪಳ ಜಿಲ್ಲೆ ಬಹುಗ್ರಾಮ ಕುಡಿಯುವ ನೀರು ಯೋಜನೆಯಡಿ (ಕುಷ್ಟಗಿ, ಕಲಬುರಗಿ ಬಹುಗ್ರಾಮ ಕುಡಿಯುವ ನೀರು ಯೋಜನೆ) ನಾರಾಯಣಪುರ ಜಲಾಶಯದಿಂದ ನೀರು ಪಡೆದು ಬಾಗಲಕೋಟೆಯಿಂದ ನೀರಿನ ಪೈಪು ಹಾದುಹೋಗುವ ಸಮಸ್ಯೆ ಪರಿಹರಿಸಬೇಕಾಗಿದೆ. ಸದರಿ ಯೋಜನೆಯಡಿ ಈಗಾಗಲೇ ಅಂದಾಜು ನೂರು ಕೋಟಿ ರೂ. ವಿನಿಯೋಗಿಸಿದ್ದು, ಅದರ ಸದ್ಬಳಕೆ ಮಾಡಿ ಯೋಜನೆ ಫಲಶೃತಿಗೊಳಿಸಬೇಕಾಗಿರುತ್ತದೆ. ಇದನ್ನು ಪರಿಹರಿಸಲು ಮಾನ್ಯ ವಿಧಾನಸಭಾ ಸದಸ್ಯರು, ಬಾಗಲಕೋಟೆ ಮತ್ತು ಗುತ್ತಿಗೆದಾರರನ್ನು ಆಹ್ವಾನಿಸಿ ಸಭೆ ಏರ್ಪಡಿಸಲು ಕ್ರಮ.

23) ಸುಸ್ಥಿತಿಯಲ್ಲಿರದ 45 ಬಹುಗ್ರಾಮ ಕುಡಿಯುವ ನೀರು ಯೋಜನೆಗಳನ್ನು ದಿ:28-01-2020 ರೊಳಗೆ ಸುಸ್ಥಿತಿಯಲ್ಲಿರಿಸಿ ನೀರು ಒದಗಿಸಲು ಕ್ರಮ.

24) ಅನುದಾನ ಕೊರತೆಯಿಂದ / ಇತರೆ ಅನಿವಾರ್ಯ ಕಾರಣಗಳಿಂದ ಬಹುಗ್ರಾಮ ಕುಡಿಯುವ ನೀರು ಯೋಜನೆ 1 ತಿಂಗಳೊಳಗೆ ಸುಸ್ಥಿತಿಯಲ್ಲಿಡಲು ಸಾಧ್ಯವಿಲ್ಲದಿದ್ದಲ್ಲಿ ಅಂತಹ ಯೋಜನೆಗಳನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುದಾನ ಪಡೆದು ಯೋಜನೆ ಸುಸ್ಥಿತಿಯಲ್ಲಿಡಲು ಕ್ರಮ.

25) ಗ್ರಾಮೀಣ ನೀರು ಸರಬರಾಜು ಯೋಜನೆಯಡಿ, ಪ್ರಸ್ತುತ ಸಾಲಿನ ಮುಂದುವರೆದ ಯೋಜನೆಗಳಡಿ ದಿನಾಂಕ:31-03-2020 ರೊಳಗೆ ಪ್ರಗತಿ ಸಾಧಿಸಿ ಅನುದಾನ ವ್ಯಪಗತವಾಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವುದು.

III. ಸ್ವಚ್ಛ ಭಾರತ ಅಭಿಯಾನ:

26) ಕರ್ನಾಟಕ ಗ್ರಾಮೀಣ ಪ್ರದೇಶವನ್ನು 2018 ರಲ್ಲಿಯೇ ಬಯಲು ಬಹಿರ್ದೆಸೆ ಮುಕ್ತ ಎಂದು ಘೋಷಿಸಲಾಗಿದ್ದರೂ ಹಾಗೂ ವೈಯಕ್ತಿಕ ಗೃಹ ಶೌಚಾಲಯ ನಿರ್ಮಾಣಗೊಳಿಸಿದ್ದರೂ ಅವುಗಳ ಸದ್ಬಳಕೆಯಾಗದಿರುವುದರ ಬಗ್ಗೆ ಸಂಯೋಜಕರು ಗ್ರಾಮೀಣ ಜನರಲ್ಲಿ ಅರಿವು ಮೂಡಿಸಿ

ಸಮರ್ಪಕ ಶೌಚಾಲಯ ಬಳಕೆಗೆ ಹಾಗೂ ಘನ ಮತ್ತು ದ್ರವ ತ್ಯಾಜ್ಯವನ್ನು ಮನೆ ಮನೆಯಿಂದ ಕಸ ಸಂಗ್ರಹಿಸುವಾಗಲೇ ಪ್ರತ್ಯೇಕಿಸಿ ನೀಡುವಂತೆ ಪ್ರೇರಣೆ ನೀಡುವ ಕಾರ್ಯ ಕೈಗೊಳ್ಳುವುದು.

27) ಹಾಲಿ 6021 ಗ್ರಾಮ ಪಂಚಾಯತಿಗಳಲ್ಲಿ 848 ಗ್ರಾಮ ಪಂಚಾಯತಿಗಳ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಘಟಕಗಳ ವಿಸ್ತೃತ ಯೋಜನಾ ವರದಿ (DPRs) ಮಾತ್ರ ಅನುಮೋದನೆಗೊಂಡಿದ್ದು, ಉಳಿದ 5173 ಗ್ರಾಮ ಪಂಚಾಯತಿಗಳ ಪ್ರಸ್ತಾವನೆ ಪಡೆದು ಅಗತ್ಯ ಕ್ರಮ.

28) ಪ್ರತಿಯೊಂದು ಗ್ರಾಮ ಪಂಚಾಯತಿಗಳಲ್ಲಿ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಘಟಕಗಳ ಸ್ಥಾಪನೆಗೆ ಪ್ರೇರಣೆ ನೀಡುವ ಜೊತೆಗೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ ಪ್ರಕರಣ 79 ರಂತೆ, ಅತ್ಯಗತ್ಯ ಸಾಮಾನ್ಯ ಗುರಿ ಸಾಧಿಸಲು 4-5 ಗ್ರಾಮ ಪಂಚಾಯತಿಗಳು ಒಟ್ಟುಗೂಡಿ ಒಡಂಬಡಿಕೆ ಮಾಡಿಕೊಂಡು ಬಹುಗ್ರಾಮ ಘನ ತ್ಯಾಜ್ಯ ನಿರ್ವಹಣೆ ಘಟಕಗಳನ್ನು ಸ್ಥಾಪಿಸಲು ಉತ್ತೇಜನ ನೀಡಲು ಕ್ರಮ.

29) 4-5 ಗ್ರಾಮ ಪಂಚಾಯತಿಗಳು ಒಟ್ಟುಗೂಡಿ ಘನ ಮತ್ತು ದ್ರವ ತ್ಯಾಜ್ಯ ಘಟಕ ಸ್ಥಾಪನೆ ಮಾಡುವುದರಿಂದ ಘಟಕ ಶಾಶ್ವತವಾಗಿ ಆರ್ಥಿಕ ಸದೃಢತೆಯಿಂದ ಕಾರ್ಯನಿರ್ವಹಿಸಲು ಅನುವಾಗುವುದರ ಜೊತೆಗೆ ಭಾರತ ಸರ್ಕಾರದಿಂದ ಪ್ರತಿ ಘಟಕಕ್ಕೆ ಲಭ್ಯವಾಗುವ ರೂ.20,000/-ಗಳು ಸದ್ಬಳಕೆಯಾಗುವ ಅಂಶ ಸಭೆಯು ಗಮನಕ್ಕೆ ತಂದುಕೊಂಡು ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಲು ಕ್ರಮ.

30) ಪ್ರತಿಯೊಂದು ಗ್ರಾಮ ಪಂಚಾಯತಿಗಳಲ್ಲಿ ಘಟಕ ಸ್ಥಾಪನೆಗೊಳಿಸಿದಲ್ಲಿ ಪ್ರತಿಯೊಂದು ಗ್ರಾಮ ಪಂಚಾಯತಿಗಳಲ್ಲಿ ಸರ್ಕಾರದ ಸ್ವತ್ತು 5 ಎಕರೆ ಜಮೀನು, ಕನಿಷ್ಠ 5 ರಿಂದ 6 ಸಿಬ್ಬಂದಿ, ಯಂತ್ರೋಪಕರಣಗಳು, ಕಸ ವಿಲೇವಾರಿಗೆ ವಾಹನ ಮತ್ತು ಚಾಲಕ, ಘಟಕದ ನಿಗಾ ಇಡಲು ಕಾವಲುಗಾರರು ಅನಿವಾರ್ಯವಾಗಿ ನೀಡಬೇಕಾಗಿದ್ದು, ಇವುಗಳ ಲಭ್ಯತೆ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಕಷ್ಟಕರವಾಗಿ, ಘಟಕ ನಿರ್ವಹಣೆಯಿಂದ ಲಾಭಕ್ಕಿಂತ ಹೆಚ್ಚು ನಷ್ಟ ಸಂಭವವಿರುತ್ತದೆ. ಆದರೆ, ಬಹುಗ್ರಾಮ ಘನ ತ್ಯಾಜ್ಯ ನಿರ್ವಹಣೆ ಘಟಕ ಸ್ಥಾಪಿಸಿದ್ದಲ್ಲಿ (4-5 ಗ್ರಾಮ ಪಂಚಾಯತಿಗಳು ಸೇರಿ 1 ಘಟಕ ಸ್ಥಾಪನೆ) ಮೇಲೆ ವಿವರಿಸಿದ ಮೂಲಭೂತ ಸೌಕರ್ಯಗಳು (ಜಮೀನು, ಬೇಲಿಂಗ್ ಯಂತ್ರ, ಪ್ರೆಸ್ಸಿಂಗ್ ಯಂತ್ರ, ಟ್ರ್ಯಾಕ್ಟರ್ ಇತ್ಯಾದಿ) ಅಷ್ಟೆಯೇ ಇದ್ದು, ಹೆಚ್ಚುವರಿ ಒಂದೆರಡು ಸಿಬ್ಬಂದಿಗಳನ್ನು ಮಾತ್ರ ಬಳಸಿ ಘಟಕ ನಿರ್ವಹಣೆಗೊಳಿಸಬಹುದಾಗಿರುವ ಅಂಶ ಸಭೆಯು ಮನಗೊಂಡು ಇದರ ಅನುಷ್ಠಾನಕ್ಕೆ ಒತ್ತು ನೀಡಲು ಕ್ರಮ.

31) ಬಹುಗ್ರಾಮ ಘನ ತ್ಯಾಜ್ಯ ನಿರ್ವಹಣೆ ಘಟಕಕ್ಕೆ ಅಗತ್ಯವಾಗಿರುವ ಯಂತ್ರೋಪಕರಣಗಳು, ಟ್ರ್ಯಾಕ್ಟರ್ ಖರೀದಿಗೆ ರಾಜ್ಯಮಟ್ಟದಿಂದ ಟೆಂಡರ್ ಕರೆದು ಇತ್ಯರ್ಥಗೊಳಿಸಿ, ಸದರಿ ದರದಲ್ಲಿ ಯಾವುದೇ ಗ್ರಾಮ ಪಂಚಾಯತಿಗಳು ಖರೀದಿಸಲು ಅನುವು ಮಾಡಿಕೊಡಲು ಕ್ರಮ.

32) ಘನ ತ್ಯಾಜ್ಯ ನಿರ್ವಹಣೆ ಘಟಕ ಸ್ಥಾಪಿಸಲು ಭಾರತ ಸರ್ಕಾರದಿಂದ ಪ್ರತಿ ಘಟಕಕ್ಕೆ ರೂ.20,000/- ಮಾತ್ರ ಲಭ್ಯವಿರುತ್ತದೆ. ಆದರೆ, ಯಂತ್ರೋಪಕರಣಗಳು, ಟ್ರ್ಯಾಕ್ಟರ್ ಖರೀದಿ ಸೇರಿದಂತೆ ಘಟಕ ಸ್ಥಾಪಿಸಲು ಕನಿಷ್ಠ 1 ಕೋಟಿ ರೂ. ಅನಿವಾರ್ಯವಾಗಿರುವುದರಿಂದ ಪ್ರತಿ

ಗ್ರಾಮ ಪಂಚಾಯತಿಗಳಲ್ಲಿ ಘಟಕ ಸ್ಥಾಪಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಭಾರತ ಸರ್ಕಾರದ ಅನುದಾನ ಯಥೇಚ್ಛವಾಗಿ ಸದುಪಯೋಗಪಡಿಸಿಕೊಳ್ಳಲು ಇದು ಸುವರ್ಣಾವಕಾಶವಾಗಿದ್ದು, ಬಹುಗ್ರಾಮ ಘನ ತ್ಯಾಜ್ಯ ನಿರ್ವಹಣೆ ಘಟಕ (4–5 ಗ್ರಾಮ ಪಂಚಾಯತಿಗಳು ಒಗ್ಗೂಡಿಸಿ 1 ಘಟಕ) 1 ಕೋಟಿ ರೂ.ಗಳಲ್ಲಿ ಸ್ಥಾಪಿಸಿ ಅನುಷ್ಠಾನಗೊಳಿಸುವುದು ಅತ್ಯಂತ ಸಮಂಜಸವೂ ಆಗಿರುವುದರಿಂದ ಈ ಬಗ್ಗೆ ತುರ್ತು ಅಗತ್ಯ ಕ್ರಮ ಕೈಗೊಂಡು ದಿನಾಂಕ:31–03–2020 ರೊಳಗೆ ಆಯವ್ಯಯದಲ್ಲಿ ಲಭ್ಯವಿರುವ ಅನುದಾನ ವ್ಯಪಗತವಾಗದಂತೆ ವಿನಿಯೋಗಿಸಲು ಕ್ರಮ.

33) ಬಹುಗ್ರಾಮ ಘನ ತ್ಯಾಜ್ಯ ನಿರ್ವಹಣೆ ಘಟಕ ಸ್ಥಾಪನೆ ಬಗ್ಗೆ ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು ಹಾಗೂ ಗ್ರಾಮೀಣ ಜನರಲ್ಲಿ ಅರಿವು ಮೂಡಿಸುವ ಕಾರ್ಯ, 4–5 ಗ್ರಾಮ ಪಂಚಾಯತಿಗಳನ್ನು ಒಗ್ಗೂಡಿಸಿ ಒಡಂಬಡಿಕೆ ಕಾರ್ಯ, ಆಯ್ಕೆಯಾದ 4–5 ಗ್ರಾಮ ಪಂಚಾಯತಿಗಳಲ್ಲಿ ರೂ.20,000/– ಹಣ ಸೆಳೆದು ಅದರ ಒಗ್ಗೂಡಣೆ ಕಾರ್ಯ ಇವುಗಳ ಸು–ಸಂಘಟನಾ ಕಾರ್ಯ ಕೈಗೊಳ್ಳಲು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯನ್ನು ನೋಡಲ್ ಅಧಿಕಾರಿಯಾಗಿ ಗುರುತಿಸಿ, ಇದಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತ್ ಕೈಗೊಳ್ಳಬೇಕಾದ ಕ್ರಮ, ತಾಲ್ಲೂಕು ಪಂಚಾಯತ್ ಕೈಗೊಳ್ಳಬಹುದಾದ ಕ್ರಮ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಕಾರ್ಯನಿರ್ವಹಿಸಲು ಅವರ ಪಾತ್ರ ಮತ್ತು ಜವಾಬ್ದಾರಿ ಗುರುತಿಸಿ ಆದೇಶ ನೀಡಿದಲ್ಲಿ ಮಾತ್ರ ಈ ಯೋಜನೆ ಫಲಪ್ರದವಾಗುವುದೆಂದು ಆಶಿಸಿ ಈ ಸಂಬಂಧ ತುರ್ತು ಅಗತ್ಯವಿರುವ ಆದೇಶ ಹೊರಡಿಸಲು ಕ್ರಮ.

34) ಬಹುಗ್ರಾಮ ಘನ ತ್ಯಾಜ್ಯ ನಿರ್ವಹಣೆ ಘಟಕಗಳ ಸ್ಥಾಪನೆಗೆ ಸಂಬಂಧಿಸಿದಂತೆ, ಅದರ ಅನುಕೂಲ, ಪ್ರತಿಕೂಲಗಳ ಅಧ್ಯಯನ, ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ ಹಾಗೂ ಗ್ರಾಮೀಣ ಜನರಲ್ಲಿ ಅರಿವು ಮೂಡಿಸಲು ಪ್ರಾದೇಶಿಕವಾರು ಕಾರ್ಯಾಗಾರ ಜನವರಿ 2020 ರಲ್ಲಿ ಏರ್ಪಡಿಸಲು ಕ್ರಮ.

## IV. ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ:

35) ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ತೀರ್ಪಿನಂತೆ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳಲ್ಲಿ ಕಡ್ಡಾಯವಾಗಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸಬೇಕಾಗಿದ್ದು, ಈ ಬಗ್ಗೆ ಬಹುತೇಕ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಸಮಿತಿಗಳನ್ನು ಈಗಾಗಲೇ ರಚಿಸಲಾಗಿದ್ದು, ಚಾಮರಾಜನಗರ ಹಾಗೂ ಹಾವೇರಿ ತಾಲ್ಲೂಕು ಹಾಗೂ 110 ಗ್ರಾಮ ಪಂಚಾಯತಿಗಳಲ್ಲಿ ಸಮಿತಿ ರಚಿಸುವ ಕಾರ್ಯ ಬಾಕಿ ಇದ್ದು, ತುರ್ತು ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವುದು.

36) ಸಮಿತಿಗಳನ್ನು ರಚಿಸಿದ ನಂತರ ಸ್ಥಳೀಯವಾಗಿ ಲಭ್ಯವಿರುವ Botany, Zoology ಪ್ರಾಧ್ಯಾಪಕರು ಹಾಗೂ ಜಿಲ್ಲಾ ಅರಣ್ಯಾಧಿಕಾರಿಗಳ ಸಹಯೋಗದೊಂದಿಗೆ ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಸಲು ಕ್ರಮ.

37) ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಸಿದ ನಂತರ ಅವುಗಳನ್ನು ಪರಿಶೀಲಿಸಿ ದೃಢೀಕರಿಸಲು ಸಮಿತಿ ರಚಿಸಲು ಕ್ರಮ.

38) ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ ಹಾಗೂ ಮೇಲೆ ವಿವರಿಸಿರುವ ಕಾರ್ಯಗಳನ್ನು ನ್ಯಾಯಾಂಗ ನಿಂದನೆಯಾಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಂಡು ಆದ್ಯತೆ ಮೇರೆ ಸಂಪೂರ್ಣಗೊಳಿಸಿ ತುರ್ತು ವರದಿ ನೀಡಲು ಕ್ರಮ.

V. **ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ:**

39) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ – ಹಂತ-3 ಅನ್ನು ಅನುಷ್ಠಾನಗೊಳಿಸುವ ದಿಸೆಯಲ್ಲಿ ಸಮಗ್ರ ಮೇಲ್ದರ್ಜೆಗೇರಿಸುವ ರಸ್ತೆಗಳ ಆದ್ಯತೆಯ ಪಟ್ಟಿ ತಯಾರಿಸುವ ಪೂರ್ವಾಪೇಕ್ಷಿತ ಕಾರ್ಯ ಬಹುತೇಕ ಜಿಲ್ಲೆಗಳಲ್ಲಿ ಬಾಕಿಯಿದ್ದು, ಸದರಿ ಕಾರ್ಯ ಆದ್ಯತೆ ಮೇಲೆ ಕೈಗೊಳ್ಳಲು ಕ್ರಮ.

40) ಸದರಿ ರಸ್ತೆಗಳ ಆದ್ಯತಾ ಪಟ್ಟಿ ಮಾನ್ಯ ಸಂಸತ್ ಸದಸ್ಯರು, ಜಿಲ್ಲಾ ಪಂಚಾಯತ್ ಅಧ್ಯಕ್ಷರ ಸಮನ್ವಯದೊಂದಿಗೆ ಮಾರ್ಗಸೂಚಿ ಅನುಸರಿಸಿ ನಿಗದಿಪಡಿಸಿದ ತಂತ್ರಾಂಶದಲ್ಲಿ ಮಾಹಿತಿ ಅಳವಡಿಸಿ ಭಾರತ ಸರ್ಕಾರದ empowered committee ಗೆ ಪ್ರಸ್ತಾವನೆ ಸಲ್ಲಿಸಲು ಕ್ರಮ.

41) DRRP, ಜನಸಂಖ್ಯೆ ಹಾಗೂ ಭೌಗೋಳಿಕ ವಿಸ್ತೀರ್ಣದ ಆಧಾರದ ಮೇಲೆ ಸಮಗ್ರ ಮೇಲ್ದರ್ಜೆಗೇರಿಸುವ ರಸ್ತೆಗಳ ಮಾಹಿತಿ ಸರ್ವೆ ಮ್ಯಾಪಿಂಗ್ ಹಾಗೂ ಜಿಯೋ ಟ್ಯಾಗಿಂಗ್ ಆಗಿರುವುದನ್ನು ಖಾತರಿಪಡಿಸಿಕೊಂಡು ಮಾಹಿತಿಗಳನ್ನು ತಂತ್ರಾಂಶದಲ್ಲಿ ಅಳವಡಿಸಿದ ನಂತರ ತಂತ್ರಾಂಶದಿಂದ ಮೇಲ್ದರ್ಜೆಗೇರಿಸುವ ರಸ್ತೆಗಳ ಆದ್ಯತಾ ಪಟ್ಟಿ ಸ್ವಯಂಚಾಲಿತವಾಗಿ ಸೃಜನೆಯಾಗುವುದರಿಂದ ಇದನ್ನು ಭಾರತ ಸರ್ಕಾರ ವೀಕ್ಷಿಸಿ ಪ್ರಸ್ತಾವನೆಗೆ ಮಂಜೂರಾತಿ ನೀಡುವುದರಿಂದ ಇದನ್ನು ಜಾಗರೂಕತೆಯಿಂದ ತಂತ್ರಾಂಶದಲ್ಲಿ ಭರ್ತಿ ಮಾಡಲು ಕ್ರಮ.

42) ಮೇಲಿನ ಮಾಹಿತಿಗಳನ್ನು, ತಂತ್ರಾಂಶದಲ್ಲಿ ಭರ್ತಿ ಮಾಡಿದ ನಂತರ ಕೇಂದ್ರ ಸರ್ಕಾರ ತಂತ್ರಾಂಶವನ್ನು ಸ್ಥಗಿತಗೊಳಿಸಿದ ನಂತರ ಯಾವುದೇ ಬದಲಾವಣೆಯನ್ನು ಮಾಡಲು ಅವಕಾಶವಿಲ್ಲದಿರುವುದನ್ನು ಗಮನದಲ್ಲಿಟ್ಟುಕೊಂಡು ಸಮರ್ಪಕ, ಕರಾರುವಕ್ಕಾದ ಮಾಹಿತಿಗಳನ್ನು ತಂತ್ರಾಂಶದಲ್ಲಿ ಇಂದೀಕರಿಸಲು ಅಗತ್ಯ ಕ್ರಮ.

43) ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನಿಯಮಿತವಾಗಿ ಕಾಮಗಾರಿಗಳ ವಸ್ತುಸ್ಥಿತಿ/ ಪ್ರಗತಿ ವಿವರಗಳನ್ನು ಪರಿಶೀಲಿಸಲು ಹಾಗೂ ಅವರ ಮಾರ್ಗದರ್ಶನದಲ್ಲಿ KRRDA ಅಧೀನದ ಜಿಲ್ಲಾ ಮಟ್ಟದ ಕಾರ್ಯಪಾಲಕ ಅಭಿಯಂತರರು ಕಾರ್ಯನಿರ್ವಹಿಸಲು ಅಗತ್ಯವಿರುವ ಸರ್ಕಾರದ ಆದೇಶ/ ಸುತ್ತೋಲೆ ಹೊರಡಿಸಲು ಅಗತ್ಯ ಕ್ರಮ.

VI. **ಸ್ವಂತ ಕಟ್ಟಡ ಹೊಂದಿರುವ ಗ್ರಾಮ ಪಂಚಾಯತಿಗಳಿಗೆ ಸೌರ ವಿದ್ಯುದ್ದೀಕರಣ:**

44) ರಾಜ್ಯದಲ್ಲಿ 6021 ಗ್ರಾಮ ಪಂಚಾಯತಿಗಳು ಕಾರ್ಯನಿರ್ವಹಿಸುತ್ತಿದ್ದು, ಅದರಲ್ಲಿ 5251 ಸ್ವಂತ ಕಟ್ಟಡ ಹೊಂದಿದ್ದು, ಅವುಗಳಿಗೆ ಸೌರಶಕ್ತಿ ಅಳವಡಿಸಲು ಅಗತ್ಯ ಕ್ರಮ.

45) ಸರ್ಕಾರದ ಸಂಸ್ಥೆಗಳು ಹಾಗೂ ಖಾಸಗಿ ಉದ್ಯಮಿಗಳು ಸೌರಶಕ್ತಿ ಅಳವಡಿಕೆ ಬಗ್ಗೆ ಪವರ್ ಪಾಯಿಂಟ್ ಪ್ರೆಸಂಟೇಷನ್ ಮೂಲಕ ಸಭೆಗೆ ಸವಿವರಗಳನ್ನು ನೀಡಿದರು. ಪ್ರತಿಯೊಂದು ಸಂಸ್ಥೆಯು ನೀಡಿರುವ ವಿವರಗಳು ಹಾಗೂ ಅಂದಾಜು ಮೊತ್ತಗಳನ್ನು ಅಧ್ಯಯಿಸಿ / ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

46) ಹಲವು ಗ್ರಾಮ ಪಂಚಾಯತಿಗಳಲ್ಲಿ ಈಗಾಗಲೇ ಸೌರಶಕ್ತಿ ದೀಪಗಳನ್ನು ಅಳವಡಿಸಿ ಸೌರ ವಿದ್ಯುತ್ತನ್ನು ಗಣಕಯಂತ್ರ, ಜೆರಾಕ್ಸ್ ಯಂತ್ರ, ಲೈಟಿಂಗ್ ವ್ಯವಸ್ಥೆ, ಫ್ಯಾನ್ UPS ಇತ್ಯಾದಿಗಳಿಗೆ ಬಳಸಿ ವಿದ್ಯುಚ್ಛಕ್ತಿ ಬಿಲ್ಲು ಹಣವನ್ನು ಉಳಿಸಿರುತ್ತಾರೆ.

47) ಗ್ರಾಮ ಪಂಚಾಯತಿಗಳಲ್ಲಿ ಭಾರತ ಸರ್ಕಾರದ 15ನೇ ಹಣಕಾಸು ಆಯೋಗದ ಗ್ರ್ಯಾಂಟ್ಸ್, ಶಾಸಕರ ಹಾಗೂ ಸಂಸದರ ಸ್ಥಳೀಯ ಅಭಿವೃದ್ಧಿ ಗ್ರ್ಯಾಂಟ್ಸ್, ಗ್ರಾಮ ಪಂಚಾಯತಿಯ ಸ್ವಂತ ಸಂಪನ್ಮೂಲಗಳಿಂದ ಭರಿಸಿ ಪ್ರತಿಯೊಂದು ಗ್ರಾಮ ಪಂಚಾಯತಿಯಲ್ಲಿ ಸೌರಶಕ್ತಿ ದೀಪ ಅಳವಡಿಸಲು ಅಗತ್ಯ ಕ್ರಮ.

48) ಕರ್ನಾಟಕದ ದಕ್ಷಿಣ ಭಾಗದ ಜಿಲ್ಲೆಗಳಲ್ಲಿ on-line grid ಉತ್ತರ ಭಾಗದ ಜಿಲ್ಲೆಗಳಲ್ಲಿ off-line grid ಮಾದರಿಯಲ್ಲಿ ಸೌರಶಕ್ತಿ ಅಳವಡಿಸುವುದು ಸಮಂಜಸವೆಂದು ಅದರಂತೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

49) ಸರ್ಕಾರದ ಎಮ್.ಎಸ್.ಐ.ಎಲ್. ಸಂಸ್ಥೆಯೂ ಸಹ ಸೌರಶಕ್ತಿ ದೀಪಗಳನ್ನು ಅತ್ಯುತ್ತಮವಾಗಿ ಕಡಿಮೆ ವೆಚ್ಚದಲ್ಲಿ ಸ್ಥಾಪಿಸಿ 5 ವರ್ಷ ವಾರಂಟಿ ನೀಡಿ ಸೇವೆ ಒದಗಿಸುತ್ತಿದ್ದು, ಈ ಸಂಸ್ಥೆಯಿಂದ ಕ್ರಮ ಕೈಗೊಂಡಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರಂತೆ 4 ಜಿ ವಿನಾಯಿತಿ ಇರುವುದರಿಂದ ಸದರಿ ಸಂಸ್ಥೆಗೆ ಕಾರ್ಯವಹಿಸುವುದರ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

50) ಖಾಸಗಿ ಸಣ್ಣ ಉದ್ಯಮಿದಾರರಿಗೂ ಉತ್ತೇಜನ ನೀಡಬೇಕಾಗಿರುವುದನ್ನೂ ಗಣನೆಗೆ ತೆಗೆದುಕೊಂಡು ಅನುಕೂಲ ಪ್ರತಿಕೂಲ ಅಧ್ಯಯಿಸಿ ಅಗತ್ಯ ಕ್ರಮ ಕೈಗೊಳ್ಳುವುದು.

51) ಹಾಲಿ ಇರುವ ವಿದ್ಯುತ್ ಕಂಬಗಳಿಗೆ ಸೋಲಾರ್ ಬೀದಿ ದೀಪ ಅಳವಡಿಕೆ, stand alone ಪದ್ಧತಿ ಹಾಗೂ centralised solar system ಈ ಮೂರು ವಿಧಗಳಲ್ಲಿಯೂ ಸೌರಶಕ್ತಿ ಬೀದಿ ದೀಪ ಅಳವಡಿಸುವುದರ ಅನುಕೂಲ ಪ್ರತಿಕೂಲಗಳನ್ನು ಅಧ್ಯಯಿಸಿ ಸೌರಶಕ್ತಿ ಬೀದಿ ದೀಪಗಳನ್ನು ಅಳವಡಿಸಲು ಕ್ರಮ.

52) ಸೌರಶಕ್ತಿ ಬಳಸುವುದರ ಜೊತೆಗೆ ಎಲ್ಲಾ ಗ್ರಾಮ ಪಂಚಾಯತ್ ಕಟ್ಟಡ ಹಾಗೂ ಬೀದಿ ದೀಪಗಳಲ್ಲಿ ಎಲ್.ಇ.ಡಿ. ಬಲ್ಬ್‌ಗಳನ್ನು ಅಳವಡಿಸಲು ಕ್ರಮ ಕೈಗೊಂಡಲ್ಲಿ ಶೇ.50 ರಷ್ಟು ವಿದ್ಯುಚ್ಛಕ್ತಿ ಬಿಲ್ಲು ಕಡಿತಗೊಳಿಸಬಹುದಾಗಿದ್ದು, ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

**VII. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:**

53) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಹೆಚ್ಚು ಹೆಚ್ಚು "ಜಲಾಮೃತ" ಕಾರ್ಯಚಟುವಟಿಕೆಗಳನ್ನು ಕೈಗೊಂಡು 2019ರ ಆಯವ್ಯಯ ಭಾಷಣದ ಘೋಷಣೆಯಂತೆ "ಜಲವರ್ಷ" ಫಲಪ್ರದಗೊಳಿಸಲು ಒತ್ತು ನೀಡುವುದು.

54) ಸದರಿ ಯೋಜನೆಯಡಿ ಭಾರತ ಸರ್ಕಾರದಿಂದ ಬಾಕಿ ಇರುವ ಅನುದಾನ ಪಡೆಯಲು ಅಗತ್ಯ ಕ್ರಮ.

55) ಪ್ರಸ್ತುತ ವರ್ಷದಲ್ಲಿ ಇಲಾಖೆಗೆ ಆಯವ್ಯಯದಲ್ಲಿ ಒದಗಿಸಿರುವ ಪೂರ್ತಿ ಅನುದಾನ (ಆರಂಭಿಕ ಶಿಲ್ಕು ಸೇರಿ) ವಿನಿಯೋಗಿಸಿ ಅದರಿಂದ ಗ್ರಾಮೀಣ ಜನರ ಶ್ರೇಯೋಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡಲು ಅಗತ್ಯವಿರುವ ಎಲ್ಲಾ ಮುಂಜಾಗರೂಕತಾ ಕ್ರಮ ಕೈಗೊಳ್ಳಲು ಸೂಚಿಸಿ ವಂದನೆಗಳೊಂದಿಗೆ ಸಭೆ ಮುಕ್ತಾಯಗೊಳಿಸಲಾಯಿತು.

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಸಂಖ್ಯೆ: ಗ್ರಾಅಪ/84/ಯೋಉಮಾ/2019 ದಿನಾಂಕ:03.01.2020

ಇವರಿಗೆ:

1) ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸಂಬಂಧಪಟ್ಟ ವಿಷಯದಡಿ ತೆಗೆದುಕೊಂಡ ಕ್ರಮದ ಅನುಪಾಲನಾ ವರದಿಯನ್ನು ನಡವಳಿ ತಲುಪಿದ 1 ವಾರದೊಳಗೆ ಸಂಬಂಧಪಟ್ಟ ನಿರ್ದೇಶಕರುಗಳಿಗೆ ಕಳುಹಿಸಿಕೊಡುವುದು.

2) ಇಲಾಖಾ ಮುಖ್ಯಸ್ಥರು / ನಿರ್ದೇಶಕರುಗಳು ತಮಗೆ ಸಂಬಂಧಪಟ್ಟ ವಿಷಯದಡಿ ಅಗತ್ಯ ಕ್ರಮ ಕೈಗೊಳ್ಳುವುದರ ಜೊತೆಗೆ, ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಂದ ಪಡೆದ ಅನುಪಾಲನಾ ವರದಿಯನ್ನು ಒಗ್ಗೂಡಿಸಿ ತಮ್ಮ ಅಭಿಪ್ರಾಯದೊಂದಿಗೆ ಅನುಪಾಲನಾ ವರದಿಯನ್ನು ಯೋಜನಾ ಉಸ್ತುವಾರಿ ಮತ್ತು ಮಾಹಿತಿ ಶಾಖೆಗೆ (ಪಿ.ಎಂ.ಐ.) ಕಳುಹಿಸಿ ದಿನಾಂಕ:28-01-2020 ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ರವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಪ್ರಗತಿ ಪರಿಶೀಲನಾ ಸಭೆಗೆ ವಿಷಯಸೂಚಿ ತಯಾರಿಸಲು ಅನುವು ಮಾಡಿ ಕೊಡಲು ಕೋರಿದೆ.

3) ಎಲ್ಲಾ ಜಿಲ್ಲಾ ಪಂಚಾಯತ್ ಅಧೀಕ್ಷಕ ಅಭಿಯಂತರರು ಹಾಗೂ ಕಾರ್ಯಪಾಲಕ ಅಭಿಯಂತರರು (ಗ್ರಾ.ನೀ.ಸ.) ಮತ್ತು ಸಂಯೋಜಕರು (ಸ್ವಭಾ.ಅ.) ರವರಿಗೆ ಅಗತ್ಯ ಕ್ರಮಕ್ಕಾಗಿ (ಮು.ಕಾ.ನಿ. ರವರ ಮೂಲಕ).

4) ನಿರ್ದೇಶಕರು - ಐ ಟಿ ಘಟಕ - ಸದರಿ ನಡವಳಿಯನ್ನು ಇಲಾಖಾ website ನಲ್ಲಿ upload ಮಾಡಲು ವ್ಯವಸ್ಥೆ ಮಾಡಲು ಕೋರಿ ಕಳುಹಿಸಿದೆ.

9/1/2020.

ನಿರ್ದೇಶಕರು
ಯೋಜನಾ ಉಸ್ತುವಾರಿ ಮತ್ತು ಮಾಹಿತಿ ವಿಭಾಗ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
[illegible], ಡಾ|| ಅಂಬೇಡ್ಕರ್ ರಸ್ತೆ
[illegible] - 1

## ಅನುಬಂಧ

1. ಶ್ರೀ ಕೆ.ಈಶ್ವರಪ್ಪ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.
2. ಶ್ರೀ ಎಲ್.ಕೆ.ಅತೀಕ್, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ಶ್ರೀ ಬೂವನಹಳ್ಳಿ ನಾಗರಾಜ್, ನಿರ್ದೇಶಕರು, ಗ್ರಾಮೂಸೌ-1.
4. ಶ್ರೀ ರೇವಣಪ್ಪ, ನಿರ್ದೇಶಕರು, ಗ್ರಾಮೂಸೌ-2.
5. ಶ್ರೀ ಅಶ್ರಫುಲ್ ಹಸನ್ , ನಿರ್ದೇಶಕರು, ಪಂಚಾಯತ್ ರಾಜ್-1.
6. ಶ್ರೀ ಪಿ.ಶಿವಶಂಕರ್, ನಿರ್ದೇಶಕರು, ಪಂಚಾಯತ್ ರಾಜ್-2.
7. ಶ್ರೀ ಮಹದೇವ್, ಆಂತರಿಕ ಆರ್ಥಿಕ ಸಲಹೆಗಾರರು.
8. ಶ್ರೀಮತಿ ಡಿ.ಆರ್.ಕಲಾವತಿ, ನಿರ್ದೇಶಕರು, ಯೋಉಮಾ.
9. ಶ್ರೀ ವಿ.ನಾಗರಾಜ್, ನಿರ್ದೇಶಕರು, ಇ-ಆಡಳಿತ.
10. ಶ್ರೀ ಪಾಲಯ್ಯ ,ನಿರ್ದೇಶಕರು, ಕೆ.ಆರ್.ಐ.ಡಿ.ಎಲ್.
11. ಶ್ರೀ ಎನ್. ಲೋಕೇಶ್,ಮುಖ್ಯ ಅಭಿಯಂತರರು, ಕೆ.ಆರ್.ಐ.ಡಿ.ಎಲ್.
12. ಶ್ರೀ ರಮೇಶ್, ಉಪನಿರ್ದೇಶಕರು,ಎಸ್.ಜಿ.ವೈ, ಗ್ರಾಅಪಂ.ರಾಜ್.
13. ಶ್ರೀ ಎಸ್.ನಂಜುಂಡರಾವ್, ಸಲಹೆಗಾರರು, ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ.
14. ಶ್ರೀ ವೇಣುಗೋಪಾಲ್, ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ.
15. ಶ್ರೀ ಇಂತಿಯಾಜ್, SPM, ಗಣಕಯಂತ್ರಕೋಶ.
16. ಶ್ರೀ ಜಗದೀಶ್, HRD, ಎಸ್.ಬಿ.ಎಂ.
17. ಶ್ರೀಮತಿ ಗಂಗೂಬಾಯಿ ರಮೇಶ್ ಮಾನಕರ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬಾಗಲಕೋಟೆ.
18. ಶ್ರೀ ಶಿವರಾಮೇಗೌಡ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬೆಂಗಳೂರು(ನ).
19. ಶ್ರೀ ನಾಗರಾಜ.ಎನ್.ಎಂ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬೆಂಗಳೂರು(ಗ್ರಾ).
20. ಶ್ರೀ ರಾಜೇಂದ್ರ ಕೆ.ವಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬೆಳಗಾವಿ.
21. ಶ್ರೀ ನಿತೀಶ್ ಕೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬಳ್ಳಾರಿ.
22. ಶ್ರೀ ಗ್ಯಾನೇಂದ್ರ ಕುಮಾರ ಗಂಗ್ವಾರ್ , ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬೀದರ್.
23. ಶ್ರೀ ಗೋವಿಂದ ರೆಡ್ಡಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ವಿಜಯಪುರ.
24. ಶ್ರೀ ರಾಜಗೋಪಾಲ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪರವಾಗಿ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು.
25. ಶ್ರೀ ಹರ್ಷಲ್ ಬೋಯರ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಾಮರಾಜನಗರ.

26. ಫೌಜೀಯ ತಾರನಮ್. ಬಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ.
27. ಶ್ರೀಮತಿ ಸತ್ಯಭಾಮ.ಸಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಿತ್ರದುರ್ಗ.
28. ಡಾ|| ಸೆಲ್ವಮಣಿ ಆರ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ದಕ್ಷಿಣ ಕನ್ನಡ.
29. ಪದ್ಮ ಬಸವಂತಪ್ಪ,ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ದಾವಣಗೆರೆ.
30. ಡಾ|| ಬಿ.ಸಿ. ಸತೀಶ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಧಾರವಾಡ.
31. ಡಾ|| ಆನಂದ್ ಕೆ ,ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಗದಗ.
32. ಡಾ|| ಪಿ.ರಾಜ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಕಲಬುರಗಿ.
33. ಶ್ರೀ ಬಿ.ಎ. ಪರಮೇಶ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ.
34. ಶ್ರೀ ರಮೇಶ್ ದೇಸಾಯಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಹಾವೇರಿ.
35. ಶ್ರೀ ಲಕ್ಷ್ಮಿಪ್ರಿಯ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಕೊಡಗು.
36. ಶ್ರೀ ದರ್ಶನ್ ಹೆಚ್.ವಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಕೋಲಾರ.
37. ಶ್ರೀ ರಘುನಂದನ್ ಮೂರ್ತಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಕೊಪ್ಪಳ.
38. ಶ್ರೀ ಕೆ.ಯಾಲಕ್ಕಿಗೌಡ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಮಂಡ್ಯ.
39. ಶ್ರೀಮತಿ ಕೆ.ಜ್ಯೋತಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಮೈಸೂರು.
40. ಶ್ರೀ ಲಕ್ಷ್ಮಿಕಾಂತ್ ರೆಡ್ಡಿ.ಜಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ರಾಯಚೂರು.
41. ಶ್ರೀ ಮೊಹಮದ್ ಇಕ್ರಮುಲ್ಲಾ ಶರೀಫ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ರಾಮನಗರ.
42. ಶ್ರೀ ಟಿ.ಕೆ.ರಮೇಶ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪರವಾಗಿ, ಜಿಲ್ಲಾ ಪಂಚಾಯಿತಿ, ತುಮಕೂರು.
43. ಶ್ರೀಮತಿ ವೈಶಾಲಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಶಿವಮೊಗ್ಗ.
44. ಶ್ರೀಮತಿ ಪ್ರೀತಿ ಗೆಹಲೋಟ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಉಡುಪಿ.

45. ಶ್ರೀ ಎಂ.ಡಿ. ರೋಷನ್,ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಉತ್ತರ ಕನ್ನಡ.
46. ಶ್ರೀಮತಿ ಶಿಲ್ಪಾ ಶರ್ಮ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಯಾದಗಿರ್.
47. ಶ್ರೀ ಎಸ್.ಕೆ. ಚಂದ್ರಶೇಖರ್,ಅಧೀಕ್ಷಕ ಅಭಿಯಂತರರು (ಗ್ರಾನೀಸ), ಮೈಸೂರು ವಿಭಾಗ.
48. ಶ್ರೀ ಶಿವಾಜಿ,ಅಧೀಕ್ಷಕ ಅಭಿಯಂತರರು (ಗ್ರಾನೀಸ), ಕಲಬುರ್ಗಿ ವಿಭಾಗ.
49. ಶ್ರೀ ಶರಣಪ್ಪ ,ಅಧೀಕ್ಷಕ ಅಭಿಯಂತರರು (ಗ್ರಾನೀಸ), ಬೆಂಗಳೂರು ವಿಭಾಗ.
50. ಶ್ರೀ ಮನ್ಮಥಯ್ಯ.ಎಂ ಸ್ವಾಮಿ, ಅಧೀಕ್ಷಕ ಅಭಿಯಂತರರು (ಗ್ರಾನೀಸ), ಬೆಳಗಾಂ ವಿಭಾಗ.
51. ಶ್ರೀ ಆರ್.ಎನ್.ಪುರೋಹಿತ್, ಕಾರ್ಯಪಾಲಕ ಅಭಿಯಂತರರು (ಗ್ರಾನೀಸ), ಬಾಗಲಕೋಟೆ.
52. ಶ್ರೀ ವೈ.ಕೆ.ಪಾರ್ಸಿ,ಜಿಲ್ಲಾ ಸಂಯೋಜಕರು, ಎಸ್.ಬಿ.ಎಂ, ಬಾಗಲಕೋಟೆ
53. ಶ್ರಿ ಎಸ್. ಶ್ರೀಧರ್, ಕಾರ್ಯಪಾಲಕ ಅಭಿಯಂತರರು (ಗ್ರಾನೀಸ), ಬೆಂಗಳೂರು (ನ).
54. ಶ್ರೀ ರವಿ.ಎಸ್.ಸೂರನ್, ಕಾರ್ಯಪಾಲಕ ಅಭಿಯಂತರರು (ಗ್ರಾನೀಸ), ಬೆಂಗಳೂರು (ಗ್ರಾ).
55. ಶ್ರೀ ಶಿವರುದ್ರಪ್ಪ, ಜಿಲ್ಲಾ ಸಂಯೋಜಕರು, ಎಸ್.ಬಿ.ಎಂ, ಬೆಂಗಳೂರು (ಗ್ರಾ).
56. ಶ್ರೀ ಕೆ.ಎಸ್.ಅಸೂಟಿ, ಕಾರ್ಯಪಾಲಕ ಅಭಿಯಂತರರು (ಗ್ರಾನೀಸ), ಬೆಳಗಾವಿ.
57. ಶ್ರೀ ಎ.ಎಸ್.ಬಣಗಾರ್, ಜಿಲ್ಲಾ ಸಂಯೋಜಕರು, ಎಸ್.ಬಿ.ಎಂ, ಬೆಳಗಾವಿ.
58. ಶ್ರೀ ಆರ್.ಪ್ರಭು, ಕಾರ್ಯಪಾಲಕ ಅಭಿಯಂತರರು (ಗ್ರಾನೀಸ),ಬಳ್ಳಾರಿ.
59. ಶ್ರೀ ರಾಜೇಶ್ ಕುಮಾರ್ .ವಿ, ಜಿಲ್ಲಾ ಸಂಯೋಜಕರು, ಎಸ್.ಬಿ.ಎಂ,ಬಳ್ಳಾರಿ
60. ಶ್ರೀ ಶಿವಾಜಿ,ಕಾರ್ಯಪಾಲಕ ಅಭಿಯಂತರರು (ಗ್ರಾನೀಸ),ಬೀದರ್.
61. ಶ್ರೀ ಕಲ್ಲಪ್ಪ, ಜಿಲ್ಲಾ ಸಂಯೋಜಕರು, ಎಸ್.ಬಿ.ಎಂ,ಬೀದರ್.
62. ಶ್ರೀ ರಾಜು, ಜಿಲ್ಲಾ ಸಂಯೋಜಕರು, ಎಸ್.ಬಿ.ಎಂ,ವಿಜಯಪುರ.
63. ಶ್ರೀ ಕಾರ್ತಿಕ್ .ವಿ, ಜಿಲ್ಲಾ ಸಂಯೋಜಕರು, ಎಸ್.ಬಿ.ಎಂ, ಚಿಕ್ಕಮಗಳೂರು.
64. ಶ್ರೀ ಎಸ್.ಜಿ.ಲೋಕೇಶ್, ಕಾರ್ಯಪಾಲಕ ಅಭಿಯಂತರರು (ಗ್ರಾನೀಸ),ಚಿಕ್ಕಬಳ್ಳಾಪುರ.
65. ಶ್ರೀ ಹೆಚ್.ಹನುಮಂತಯ್ಯ,ಕಾರ್ಯಪಾಲಕ ಅಭಿಯಂತರರು (ಗ್ರಾನೀಸ),ಚಿತ್ರದುರ್ಗ.
66. ಶ್ರೀಮತಿ ಮಂಜುಳಾ, ಜಿಲ್ಲಾ ಸಂಯೋಜಕರು, ಎಸ್.ಬಿ.ಎಂ,ದಕ್ಷಿಣ ಕನ್ನಡ.
67. ಶ್ರೀ ಹೆಚ್. ನಾಗಪ್ಪ, ಕಾರ್ಯಪಾಲಕ ಅಭಿಯಂತರರು (ಗ್ರಾನೀಸ),ದಾವಣಗೆರೆ.
68. ಕಾರ್ಯಪಾಲಕ ಅಭಿಯಂತರರು (ಗ್ರಾನೀಸ),ಧಾರವಾಡ.
69. ಪದ್ಮಾವತಿ.ಎನ್, ಜಿಲ್ಲಾ ಸಂಯೋಜಕರು, ಎಸ್.ಬಿ.ಎಂ,ಧಾರವಾಡ.
70. ಪಿ.ಎ.ಕನವಲ್ಲಿ, ಕಾರ್ಯಪಾಲಕ ಅಭಿಯಂತರರು (ಗ್ರಾನೀಸ),ಗದಗ.
71. ಶ್ರೀ ಸರೇಶ್, ಜಿಲ್ಲಾ ಸಂಯೋಜಕರು, ಎಸ್.ಬಿ.ಎಂ,ಗದಗ.
72. ಶ್ರೀ ಸತೀಶ್ ,ಕಾರ್ಯಪಾಲಕ ಅಭಿಯಂತರರು (ಗ್ರಾನೀಸ),ಕಲಬುರ್ಗಿ.
73. ಶ್ರೀಮತಿ ಗುರುಬಾಯಿ ಎಸ್.ಪಾಟೀಲ್, ಜಿಲ್ಲಾ ಸಂಯೋಜಕರು, ಎಸ್.ಬಿ.ಎಂ, ಕಲಬುರ್ಗಿ.
74. ಶ್ರೀ ಎಸ್.ಎ.ಶ್ರೀನಿವಾಸ್, ಕಾರ್ಯಪಾಲಕ ಅಭಿಯಂತರರು (ಗ್ರಾನೀಸ),ಹಾಸನ.
75. ಶ್ರೀ ಕೆ.ವಿ. ಹಂಚಿನಮನಿ, ಕಾರ್ಯಪಾಲಕ ಅಭಿಯಂತರರು (ಗ್ರಾನೀಸ),ಹಾವೇರಿ.

76. ಶ್ರೀ ಬಿ.ಗೋವಿಂದ್ ರಾಜ್ , ಜಿಲ್ಲಾ ಸಂಯೋಜಕರು, ಎಸ್.ಬಿ.ಎಂ,ಹಾವೇರಿ.
77. ಶ್ರೀ ರೇವಣ್ಣನವರ್, ಕಾರ್ಯಪಾಲಕ ಅಭಿಯಂತರರು (ಗ್ರಾನೀಸ),ಕೊಡಗು.
78. ಕಾರ್ಯಪಾಲಕ.ಅಭಿಯಂತರರು (ಗ್ರಾನೀಸ),ಕೋಲಾರ.
79. ಜಿಲ್ಲಾ ಸಂಯೋಜಕರು, ಎಸ್.ಬಿ.ಎಂ,ಕೋಲಾರ.
80. ಶ್ರೀ ರಂಗಯ್ಯ,ಕಾರ್ಯಪಾಲಕ ಅಭಿಯಂತರರು (ಗ್ರಾನೀಸ),ಕೊಪ್ಪಳ.
81. ಶ್ರೀಮತಿ ಆಫ್ರಿನ್ ,ಜಿಲ್ಲಾ ಸಂಯೋಜಕರು, ಎಸ್.ಬಿ.ಎಂ, ಕೊಪ್ಪಳ.
82. ಶ್ರೀ ಎಸ್. ಕುಮಾರ್ , ಕಾರ್ಯಪಾಲಕ ಅಭಿಯಂತರರು (ಗ್ರಾನೀಸ),ಮಂಡ್ಯ.
83. ಶ್ರೀ ಶಿವಕುಮಾರ್ ಎಸ್, ಜಿಲ್ಲಾ ಸಂಯೋಜಕರು, ಎಸ್.ಬಿ.ಎಂ, ಮಂಡ್ಯ.
84. ಶ್ರೀ ಶಶಿಕುಮಾರ್ ,ಜಿಲ್ಲಾ ಸಂಯೋಜಕರು, ಎಸ್.ಬಿ.ಎಂ, ಮೈಸೂರು.
85. ಶ್ರೀ ಗಣಪತಿ, ಜಿಲ್ಲಾ ಸಂಯೋಜಕರು, ಎಸ್.ಬಿ.ಎಂ,ರಾಯಚೂರು.
86. ಶ್ರೀ ಚಂದ್ರಹಾಸ, ಕಾರ್ಯಪಾಲಕ ಅಭಿಯಂತರರು (ಗ್ರಾನೀಸ),ರಾಮನಗರ.
87. ಶ್ರೀ ಪ್ರಕಾಶ್ , ಕಾರ್ಯಪಾಲಕ ಅಭಿಯಂತರರು (ಗ್ರಾನೀಸ), ತುಮಕೂರು.
88. ಶ್ರೀ ರಾಕೇಶ್ ದೊಡ್ಡಮನಿ, ಜಿಲ್ಲಾ ಸಂಯೋಜಕರು, ಎಸ್.ಬಿ.ಎಂ, ತುಮಕೂರು.
89. ಶ್ರೀ ಗಂಗಾಧರಪ್ಪ ,ಕಾರ್ಯಪಾಲಕ ಅಭಿಯಂತರರು (ಗ್ರಾನೀಸ),ಶಿವಮೊಗ್ಗ.
90. ಶ್ರೀ ಸಂತೋಷ್ ಕುಮಾರ್,ಜಿಲ್ಲಾ ಸಂಯೋಜಕರು, ಎಸ್.ಬಿ.ಎಂ, ಶಿವಮೊಗ್ಗ
91. ಶ್ರೀ ಎಸ್.ವಿ. ಬುಗಟಿ,ಕಾರ್ಯಪಾಲಕ ಅಭಿಯಂತರರು (ಗ್ರಾನೀಸ),ಉತ್ತರ ಕನ್ನಡ.
92. ಶ್ರೀ ಸೂರ್ಯನಾರಾಯಣ ಭಟ್ಟ,ಜಿಲ್ಲಾ ಸಂಯೋಜಕರು, ಎಸ್.ಬಿ.ಎಂ, ಉತ್ತರ ಕನ್ನಡ.
93. ಶ್ರೀ ಮಲ್ಲಿಕಾರ್ಜುನ್ ,ಕಾರ್ಯಪಾಲಕ ಅಭಿಯಂತರರು (ಗ್ರಾನೀಸ),ಯಾದಗಿರಿ.
94. ಶ್ರೀ ಗಣಪತಿ,ಕಾರ್ಯಪಾಲಕ ಅಭಿಯಂತರರು (ಗ್ರಾನೀಸ),ಬೀದರ್.